## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ

**ಸಿ.ಸಿ.ನಂ. 345/2020**

ಚಾಸಾ - 1

ಪ್ರಾ.ಸಾ. - 1

**ಸಾಕ್ಷಿದಾರರ ಹೆಸರು ಃ** ಮಲ್ಲಿಕಾರ್ಜುನ ಕಾಶೆಪ್ಪ ಕಾಲಗಗ್ಗರಿ

**ಸಾಕ್ಷಿದಾರರ ವಯಸ್ಸು ಃ** 42 ವರ್ಷ

**ಸಾಕ್ಷಿದಾರರ ಉದ್ಯೋಗ ಃ** ಶೇತ್ಕಿ

**ಸಾಕ್ಷಿದಾರರ ವಿಳಾಸ ಃ** ಅಮಟೂರು

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 27-09-2023**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ನಾನು ನನ್ನ ಸ್ವಂತ ಜಮೀನು 175/2 ಇದರಲ್ಲಿ ನನ್ನ ಹೆಸರು ದಾಖಲು ಮಾಡಿಕೊಂಡು ಮನೆಯನ್ನು ಕಟ್ಟಿಕೊಂಡಿರುತ್ತೇನೆ. ಅದೇ ಮನೆಯಲ್ಲಿ ನಾನು , ಚಾಸಾ 4 ರಿಂದ 6 ವಾಸವಾಗಿರುತ್ತೇವೆ. ದಿಃ 24-11-2019 ರಂದು ಮುಂಜಾನೆ 11.30 ರ ಸುಮಾರಿಗೆ ನಾವೆಲ್ಲರೂ ಮನೆಯಲ್ಲಿದ್ದಾಗ ಆರೋಪಿತರು ನಮ್ಮ ಮನೆಗೆ ಬಂದು ಸದರಿ ಮನೆಯನ್ನು ಇಲ್ಲಿ ಏಕೆ ಕಟ್ಟಿದ್ದೀರಿ ಈ ಕುರಿತು ತಂಟೆ ತಕರಾರು ಇರುತ್ತದೆ ಎಂದು ಹೇಳಿ ಜಗಳ ತೆಗೆದರು. ಆ ವೇಳೆಗೆ 1 ನೇ ಆರೋಪಿಯು ಬಡಿಗೆಯಿಂದ ನನ್ನ ಬಲಗಾಲಿಗೆ ಬಡಿದಿರುತ್ತಾನೆ, ನಂತರ ನಾನು ಚೀರಾಡುವಾಗ ಜಗಳವನ್ನು ಬಿಡಿಸಲು ಬಂದ ಚಾಸಾ 4 ಇವರಿಗೆ 2 ನೇ ಆರೋಪಿಯು ಕಲ್ಲಿನಿಂದ ಅವನ ಎಡಗಾಲಿಗೆ ಹೊಡೆದು ಗಾಯಪಡಿಸಿರುತ್ತಾನೆ. ಇದೇ ವೇಳೆಯಲ್ಲಿ 1 ನೇ ಆರೋಪಿಯು ಚಾಸಾ 5 ಮತ್ತು 6 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿರುತ್ತಾನೆ. ನಂತರ ಆರೋಪಿತರು ನಮಗೆ ಈ ಜಾಗವನ್ನು ಬಿಟ್ಟು ಹೋಗಲಿಲ್ಲ ಎಂದರೆ ಜೀವಂತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುವರು . ನಂತರ ನಾವೆಲ್ಲರೂ ಬೈಲಹೊಂಗಲ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುತ್ತೇವೆ. ನಂತರ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದು ಮಾರನೇ ದಿನ ನಮ್ಮ ಊರಿನಲ್ಲಿರುವ ಹಿರಿಯರನ್ನು ಕೇಳಿ ದಿಃ 26-11-2019 ರಂದು ದೂರನ್ನು ನೀಡಿರುತ್ತೇವೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ ಪೋಲಿಸರು ಬೆಳಿಗ್ಗೆ 9.00 ಗಂಟೆಗೆ ಬಂದು 9.00 ರಿಂದ 10.00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ಒಂದು ಬಡಿಗೆ ಮತ್ತು ಕಲ್ಲನ್ನು ವಶಕ್ಕೆ ಪಡೆದು ಪಂಚನಾಮೆ ಬರೆದು ಅದೇ ವೇಳೆಗೆ ಹಾತ ನಕಾಶೆಯನ್ನು ತಯಾರಿಸಿ ನನ್ನ ಸಹಿಯನ್ನು ಪಡೆದಿರುವರು . ಸಾಕ್ಷಿಯು ಪಂಚನಾಮೆ ಮತ್ತು ಹಾತ ನಕಾಶೆಯಲ್ಲಿರುವ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು

ಒಟ್ಟಾಗಿ ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಅದೇ ವೇಳೆಗೆ 2 ಫೋಟೊಗಳನ್ನು ಫೋೀಲಿಸರು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಫೋಟೊಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ 3 ಮತು 4 ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸರಿಗೆ ಸ್ಥಳ ಪಂಚನಾಮೆ ಕಾಲಕ್ಕೆ ಹಾಜರು ಇದ್ದ ಬಗ್ಗೆ ಮತ್ತು ಆ ವೇಳೆಗೆ ಬಸವರಾಜ ಈಟಿ ಹಾಜರು ಇದ್ದ ಬಗ್ಗೆ ಪೋಲಿಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಡಿಗೆಯನ್ನು ಮತ್ತು ಕಲ್ಲನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮ – 1 ಮತ್ತು 2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು 7 ನೇ ತರಗತಿವರೆಗೆ ಕಲಿತಿದ್ದೇನೆ. ಸ ನಂ 175/1 ಕ್ಕೆ ಜಮೀನಿಗೆ ಸಂಬಂಧಿಸಿದಂತೆ ನಮಗೂ ಆರೋಪಿತರಿಗೂ ಸಂಬಂಧ ಸರಿ ಇಲ್ಲ ಎಂದರೆ ಸರಿ . ಸ ನಂ 175/1 ಜಮೀನಿಗೆ ಸಂಬಂಧಿಸಿದಂತೆ ಸಿವಿಲ ನ್ಯಾಯಾಲಯದ ಆದೇಶ ಆರೋಪಿತರ ಪರವಾಗಿ ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಅದ ತನಿಖೆಗೆ ಬಾಕಿ ಇರುತ್ತದೆ. ನನ್ನ ಜಮೀನು ಹಾಗೂ ಆರೋಪಿತರ ಜಮೀನು ಒಂದಕ್ಕೊಂದು ಹೊಂದಿಕೊಂಡಿದೆ ಎಂದರೆ ಸರಿಯಲ್ಲ. ಅದೇ ಜಮಿನಿನಲ್ಲಿ ನಾನು ಮನೆಯನ್ನು ಕಟ್ಟಿಸುತ್ತಿದ್ದೇನೆ ಎಂದರೆ ಸರಿಯಲ್ಲ. ವ್ಯಾಜ್ಯ ಇರುವ ಕಾರಣ ಮನೆ ಹಾಕಿಸದಂತೆ ಆರೋಪಿತರು ನನಗೆ ಹೇಳಿರುವರು ಎಂದರೆ ಸರಿಯಲ್ಲ. ಆ ಕಾರಣ ನಾನು ಸಿಟ್ಟಿಗೆದ್ದು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಲ್ಲೆ ಮಾಡಿದ ಕಾರಣ ಆರೋಪಿತರು ನನ ಮೇಲೆ ದೂರು ನೀಡಿರುವರು ಎಂದರೆ ಸರಿಯಲ್ಲ. ಆ ಬಗ್ಗೆ ಸಿಸಿ ನಂ 342/2019 ರಂತೆ ಇದೇ ನ್ಯಾಯಾಲಯದಲ್ಲಿ ತನಿಖೆ ನಡೆಯುತ್ತದೆ ಎಂದರೆ ಅದು ಸುಳ್ಳು ಕೇಸಾಗಿರುತ್ತದೆ. ಆಸ್ತಿಯನ್ನು ಆರೋಪಿತರಿಗೆ ಕೊಡಬೇಕಾಗುತ್ತದೆ ಎಂದು ನಾನು ಅವರ ವಿರುದ್ಧ ಸುಳ್ಳು ಕೇಸು ಮಾಡಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ದೂರು ನೀಡಿದ ನಂತರ ನಾನು ಮರುದಿನ ನಾನು ಪೋಲಿಸರಿಗೆ ಆರೋಪಿತರ ವಿರುದ್ಧ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಮುದ್ದೆಮಾಲಿಗಳಿಂತಿರುವ ಕಟ್ಟಿಗೆಗಳು ಸಿಗುತ್ತವೆ ಎಂದರೆ ಸರಿ . ಪೋಲಿಸರು ಸ್ಥಳಕ್ಕೆ ಬಂದಾಗ ನಾನು ಸ್ಥಳವನ್ನು ತೋರಿಸಿದ್ದೇನೆ , ಪೋಲಿಸರು ಪಂಚನಾಮೆ ಮಾಡಿರುವರು ಮತ್ತು ಹಾತ ನಕಾಶೆ ತಯಾರಿಸುವರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೊಂದು ಜಾಗದಲ್ಲಿ ನಿಂತು ಪೋಲಿಸರು ಫೋಟೊ ತೆಗೆದಿರುವರು ಎಂದರೆ ಸರಿಯಲ್ಲ. ನಮ್ಮ ನಡುವೆ ಇರುವ ಸಿವಿಲ ವಿವಾದದ ಸಂಬಂಧ ದ್ವೇಷವನ್ನು ಆರೋಪಿತರ ವಿರುದ್ಧ ಬಳಸಿಕೊಂಡು ನಾನು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ